# ಅಜ್ಜಿ ಮನೆ ಗೋಡೆಗೆ ವರ್ಲಿ ಚಿತ್ತಾರ

ಬೇಸಿಗೆ ರಜೆಯನ್ನು ಶಿವಮೊಗ್ಗದ ಅಜ್ಜಿಯ ಮನೆಯಲ್ಲಿ ಕಳೆಯಲು ಹೋದ ನನ್ನ ಮಗಳು ನಲ್ಮೆ, ಮನೆಯ ಗೋಡೆಯ ಮೇಲೆ ವರ್ಲಿ ಚಿತ್ರ ಮೂಡಿಸಿದ್ದಾಳೆ. ತನ್ನ ಅಜ್ಜಿ ಹಾಗೂ ಅಮ್ಮನ ಸಹಾಯದಿಂದ ತನ್ನ ಕಲ್ಪನೆಗಳಿಗೆ ರೇಖೆಗಳ ಮೂಲಕ ರೂಪ ನೀಡಿ ರಜೆಯನ್ನು ಸೃಜನಶೀಲವಾಗಿ ಸಾರ್ಥಕಗೊಳಿಸಿಕೊಳ್ಳುವ ಚಿಕ್ಕ ಪ್ರಯತ್ನ ಅವಳದ್ದು. ಹಿಂದೆ ನಾವು ಚಿಕ್ಕವರಿದ್ದಾಗ ಅಜ್ಜನ ಮನೆಯಲ್ಲಿ ನಮ್ಮ ಬೇಸಿಗೆ ಶಿಬಿರ ನಡೆಯುತ್ತಿತ್ತು. ಆಡಲು ಹತ್ತಾರು ಮಕ್ಕಳು, ವಿವಿಧ ಆಟಗಳಿರುತ್ತಿದ್ದವು. ಆದರೆ ಇಂದು ಈ ರೀತಿಯ ಅಜ್ಜನ ಮನೆಯ ಸುಖ ಮಕ್ಕಳಿಗೆ ಸಿಗುತ್ತಿಲ್ಲ. ಸಿಕ್ಕ ಸಮಯವನ್ನು ಹೀಗೆ ವಿಭಿನ್ನವಾಗಿ ಬಳಸಿಕೊಳ್ಳುವ ಆಲೋಚನೆ ಈ ಪುಟ್ಟ ಹುಡುಗಿಯದ್ದು.

—ಎಚ್.ಎಸ್. ನವೀನ ಕುಮಾರ್, ಹೊಸದುರ್ಗ











# ತೆಂಗಿನ ಕರಟ; ಬೀಜಗಳ ಕಣಜ

ತರಕಾರಿ ಬೀಜಗಳು ಇಂದು ಮಾರುಕಟ್ಟೆಯಲ್ಲಿ ಅನಾಯಾಸವಾಗಿ ದೊರಕುತ್ತವೆ. ಆದರೆ ಹಿಂದೆಲ್ಲ ಹೀಗೆ ದೊರಕುತ್ತಿರಲಿಲ್ಲ. ಪ್ರತಿವರ್ಷ ಫಸಲಿನಲ್ಲಿ ಒಂದು ಉತ್ತಮವಾದ ಕಾಯಿಯನ್ನು ಬಲಿಯಲು ಬಿಟ್ಟು ನಂತರ, ಆ ಕಾಯಿಯಲ್ಲಿ ದೊರೆಯುತ್ತಿದ್ದ ಬೀಜಗಳನ್ನು ಸಂರಕ್ಷಿಸಿಡುತ್ತಿದ್ದರು. ಬೀಜಗಳನ್ನು ಹುಳಹುಪ್ಪಟೆ, ಪರಿಸರದ ಬದಲಾವಣೆಗಳಿಂದ ರಕ್ಷಿಸಲು ತೆಂಗಿನಕಾಯಿ ಗರಟೆ(ಕರಟೆ)ಯಿಂದ ತಯಾರಿಸಿದ ಶೀಶೆಯನ್ನು ಬಳಸುತ್ತಿದ್ದರು.

ಈ ಫೋಟೊದಲ್ಲಿರುವ ಕರಟದ ಶೀಶೆ ಸುಮಾರು 100 ವರ್ಷದಷ್ಟು ಹಳೆಯದು, ಸಾಗರದ ನಿವಾಸಿಯಾದ ಸುರೇಂದ್ರ ಮಲ್ಯ ಅವರ ಮನೆಯಲ್ಲಿ ಕಾಣಸಿಕ್ಕಿತು. ಮೊದಲಿಗೆ ದೊಡ್ಡದಾದ ತೆಂಗಿನಕಾಯಿಯನ್ನು ಆಯ್ಕೆಮಾಡಿ, ಅದರ ಕಣ್ಣಿನ ಭಾಗದಲ್ಲಿ ರಂಧ್ರ ಮಾಡಲಾಗುತ್ತಿತ್ತು. ಅದರಲ್ಲಿ ನೀರು ತುಂಬಿ ಕಾಯಿಯಲ್ಲಿನ ಕೊಬ್ಬರಿ ತಿರುಳನ್ನು ಕೊಳೆಸಿ ನಂತರ ಅದನ್ನು ಹೊರತೆಗೆಯಲಾಗುತ್ತದೆ. ಕೊನೆಗೆ ಟೊಳ್ಳಾದ ತೆಂಗಿನ ಗರಟೆಯ ಶೀಶೆಯನ್ನು ಸಿದ್ಧಪಡಿಸಿ ಅದರ ಕಣ್ಣಿಗೆ ಒಂದು ಮರದ ಬಿರಡೆ ಸಿದ್ಧಪಡಿಸಿ ಗಾಳಿ, ಬೆಳಕು, ನೀರು, ಹುಳಹುಪ್ಪಟೆಗಳು ಒಳಹೋಗದಂತೆ ಮುಚ್ಚುತ್ತಿದ್ದರು.

—ಅಂಜನ್ ಕಾಯ್ಕಿಣಿ, ಸಾಗರ